ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಪೋಲೀಸ್ ಇಲಾಖೆಯ ಸುದ್ದಿಗಳನ್ನು ಪತ್ರಿಕೆಗಳಿಗೆ ತಿಳಿಸಲು ಯಾವುದೇ ನಿರ್ದಿಷ್ಟ ಸೂಚನೆಗಳನ್ನು ಕೊಟ್ಟಿರುವುದಿಲ್ಲ. ಸಾಮಾನ್ಯವಾಗಿ ಅಪರಾಧ, ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಕೈಕೊಂಡ ಕ್ರಮಗಳ ಮಾಹಿತಿಯನ್ನು ಆರಕ್ಷಕಾಧೀಕ್ಷಕರ ಮಟ್ಟಕ್ಕೆ ಕಡಿಮೆಯಿಲ್ಲದ ಅಧಿಕಾರಿಗಳು ಬಿಡುಗಡೆ ಮಾಡುವರು.

ಆ) ಇಲ್ಲ. ಆದರೆ ಹೊಸದುರ್ಗದ ಪೋಲೀಸ್ ಸಬ್-ಇನ್ಸ್‌ಪೆಕ್ಟರ್‌ರವರು ಪತ್ರಿಕಾ ಪ್ರತಿನಿಧಿಯಾದ ಶ್ರೀ ಶ್ರೀನಿವಾಸ ಮೂರ್ತಿಯವರನ್ನು ಹೊಸದುರ್ಗದ ಪ್ರಥಮ ದರ್ಜೆ ಕಾಲೇಜ್ ವಿದ್ಯಾರ್ಥಿಯು ಸದರೀ ಕಾಲೇಜಿನ ಜವಾನನ ಮೇಲೆ ಹಲ್ಲೆ ಮಾಡಿದ್ದರ ಬಗ್ಗೆ ಸತ್ಯಾಂಶ ಬಚ್ಚಿಟ್ಟು ವರದಿ ಮಾಡಿದ್ದು ಸರಿಯಿಲ್ಲವೆಂದು ಹೇಳಿ ಸತ್ಯಾಂಶ ಪ್ರಕಟಿಸಲು ವಿನಂತಿಸಿಕೊಂಡರು.

ರಾಜ್ಯದ ಪೋಲೀಸರ ಬಗ್ಗೆ.

೧೪೨೧. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಒಟ್ಟು ಪೋಲೀಸರ ಸಂಖ್ಯೆ ಎಷ್ಟು ?

ಆ) ಇವರಲ್ಲಿ ಮೀಸಲು ಪಡೆಯ ಸಂಖ್ಯೆ ಎಷ್ಟು ?

ಇ) ನಿಗದಿತ ಕೆಲಸದ ವೇಳೆಯಲ್ಲಿ ವ್ಯತ್ಯಾಸ ವಿರುವುದು ನಿಜವಲ್ಲವೆ. ಈವರೆಗಿನ ವೇಳೆಯಕ್ಕೆ ಅನುಗುಣವಾಗಿ ಸೌಲಭ್ಯಗಳನ್ನು ಹಾಗೂ ವೇತನವನ್ನು ಸರಿಯಾಗಿ ಒದಗಿಸಲಾಗಿತ್ತಿದೆಯೆ ?

ಈ) ಮೀಸಲು ಪಡೆಯವರಿಗೆ ಈ ಹಿಂದೆ ಭಾನುವಾರದ ಭತ್ಯೆ ಕೊಡುತ್ತಿದ್ದು ಈಗ ಈ ಸೌಲಭ್ಯವನ್ನು ನಿಲ್ಲಿಸಿರುವುದಕ್ಕೆ ಕಾರಣವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ೪೩,೬೪೧

ಆ) ೧೪,೨೧೩

ಇ) ಇಲ್ಲ.
ಸೌಲಭ್ಯಗಳನ್ನು ಹಾಗೂ ವೇತನಗಳನ್ನು ವೇಳೆಗನುಗುಣವಾಗಿ ಕೊಡಲಾಗುತ್ತಿದೆ.

ಈ) ಸೌಲಭ್ಯಗಳನ್ನು ನಿಲ್ಲಿಸಿರುವುದಿಲ್ಲ.

ಹೊನ್ನಾಳಿ ತಾಲ್ಲೂಕಿನ ಆರುಂದೆ ಗ್ರಾಮದಲ್ಲಿ ಕ್ರೀಡಾಂಗಣವನ್ನು ನಿರ್ಮಿಸುವುದು.

೧೪೭೭. ಶ್ರೀ ಡಿ. ಜಿ. ಬಸವಣ್ಣ ಗೌಡ (ಹೊನ್ನಾಳಿ).—ಮಾನ್ಯ ವಾರ್ತಾ, ಯುವ ಜನ ಸೇವಾ; ಕ್ರೀಡಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊನ್ನಾಳಿ ತಾಲ್ಲೂಕು ಆರುಂಡೆ ಗ್ರಾಮದಲ್ಲಿ ಗ್ರಾಮಾಂತರ ಕ್ರೀಡಾಂಗಣವನ್ನು ನಿರ್ಮಿಸಿ ಕೊಡಲು ಕೋರಿಕೆಯೇನಾದರೂ ಸರ್ಕಾರದವರ ಗಮನದಲ್ಲಿರುವುದೇ ?

ಆ) ಹಾಗಿದ್ದಲ್ಲಿ ಇನ್ನು ಮುಂದಾದರೂ ಮೇಲ್ಕಂಡ ಗ್ರಾಮಕ್ಕೊಂದು ಕ್ರೀಡಾಂಗಣ ಕಟ್ಟಿ ಕೊಳ್ಳಲು ಸರ್ಕಾರದವರು ಸಹಾಯ ಧನ ನೀಡುವರೆ ?

ಶ್ರೀ ಜೀವರಾಜ ಆಳ್ವ (ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನ ಸೇವಾ ಇಲಾಖೆಯ ರಾಜ್ಯ ಸಚಿವರು). —

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.